ಸಿ. ಸಿ. ನಂ. 1547/2021

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 04-12-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದಃ**

ಮುಂದುವರಿದ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ ಶ್ರೀ ವಿ. ಆರ್. ಎನ್. ವಕೀಲರಿಂದಃ**

ಎರಡು ವರ್ಷದಿಂದ ಈಚೆಗೆ ನನ್ನ ಮತ್ತು ಆರೋಪಿತರ ಮಧ್ಯೆ ಸುಮಾರು 4-5 ಪ್ರಕರಣಗಳು ದಾಖಲಾಗಿವೆ. ನಮ್ಮ ಕುಟುಂಬಕ್ಕೆ ಸೇರಿದ ಸರ್ವೆ ನಂ. 748 ಆಗಿರುತ್ತದೆ. ಸದ್ರಿ ಸರ್ವೆ ನಂಬರಿನಲ್ಲಿ ನಮ್ಮ ಮನೆ ಬಿಟ್ಟರೆ ಬೇರೆ ಯಾರ ಮನೆಯೂ ಇರುವುದಿಲ್ಲ. ಸದ್ರಿ ಸರ್ವೆ ನಂಬರಿನಲ್ಲಿ ಯಾವದೇ ರಸ್ತೆ ಹಾದುಹೋಗಿದ್ದು ಇರುವುದಿಲ್ಲ. ನಮ್ಮ ಸರ್ವೆ ನಂಬರಿನಲ್ಲಿ ಯಾವದೇ ಸಾರ್ವಜನಿಕ ಕಾಲು ದಾರಿ ಅಥವಾ ರಸ್ತೆ ಇದ್ದದ್ದು ಇರುವುದಿಲ್ಲ. ನಮ್ಮ ಜಾಗಕ್ಕೆ ಗಡಿ ಗುರುತು ಇದೆ, ಕಂಪೌಂಡ ಇರುವುದಿಲ್ಲ, ಬೇಲಿ ಇದೆ. ನಾವು ಸುತ್ತಲೂ ಬೇಲಿ ಹಾಕಿ ಗಡಿ ಮಾಡಿಕೊಂಡಿರುತ್ತೇವೆ. ಸದ್ರಿ ಬೇಲಿ ಒಳಗೆ ಇರುವ ಸ್ವತ್ತು ನಮಗೆ ಮಾತ್ರ ಸೇರಿರುತ್ತದೆ. ಆರೋಪಿತರ ವಿರುದ್ಧ ನಾನು ತಡೆಯಾಜ್ಞೆ ಕೋರಿ ದಾವಾ ಹಾಕಿರುತ್ತೇನೆ. ನಮ್ಮ ಜಾಗದಲ್ಲಿ ಒಂದು ದನದ ಕೊಟ್ಟಿಗೆ ಇದ್ದು ಅದಕ್ಕೆ ಹೋಗಲು ಒಂದು ಕಾಲುದಾರಿ ಇದ್ದು ಸದ್ರಿ ಕಾಲುದಾರಿಯ ಕುರಿತು ದಾವಾ ಹೂಡಿದ್ದೇನೆ. ಆರೋಪಿತರು ಸದ್ರಿ ಕಾಲುದಾರಿಯನ್ನು ಅಗಲ ಮಾಡಲು ಪ್ರಯತ್ನಿಸಿದ್ದರು. ಸದ್ರಿ ದಾವೆಯಲ್ಲಿ ನಾನು ಸದ್ರಿ ರಸ್ತೆಯನ್ನು ಸಾರ್ವಜನಿಕ ರಸ್ತೆ ಎಂದು ತೋರಿಸಿದ್ದು ಇರುವುದಿಲ್ಲ.

(ಸಾಕ್ಷಿ ಸರಿಯಾಗಿ ಉತ್ತರ ನೀಡದೇ ಇದ್ದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.